# ಸಮಯದ ಮನೆಗೆ ಪಯಣ

**ಇದು ಕಾಲಾತೀತ ಪಯಣ. ಜಗತ್ತಿನಾದ್ಯಂತ ಸಮಯವನ್ನು ಏಕಸೂತ್ರದಲ್ಲಿ ಕಟ್ಟಿ ಹಾಕಲು ಮಾನವ ನಡೆಸಿದ ಅಪೂರ್ವ ಪ್ರಯತ್ನಗಳನ್ನು ಮನನ ಮಾಡಿಕೊಳ್ಳುವ ಪಯಣ!**

ಚಿತ್ರ ಲೇಖನ: **ಪ್ರದೀಪ್ ಕುಮಾರ್**

'ಸಮಯದ ಗೊಂಬೆ'ಯ ಮನೆ ಎಲ್ಲಿದೆ? ಕೈಗಡಿಯಾರಗಳಲ್ಲೂ, ಮೊಬೈಲ್‌ಗಳಲ್ಲೂ ತಟ್ಟನೆ ಕಾಣಿಸುವ ಸಮಯದ ಹಿಂದಿರುವ ಸಂಶೋಧನೆಗಳೇನು? ಇಂದು, ಪುಟ್ಟ ಮಕ್ಕಳೂ ಗುರುತಿಸಬಲ್ಲ ಸಮಯ, ಅನಾದಿ ಕಾಲದಿಂದಲೂ ಮಾನವನಿಗೆ ಹೇಗೆ ಬೃಹತ್ ಸವಾಲಾಗಿತ್ತು?

ಬನ್ನಿ, ಸಮಯದ ಮನೆಗೆ ಹೋಗಿ ಬರೋಣ.

ಈ ಭೂಮಿಯಲ್ಲಿ ಜನಿಸಿದ ಕ್ಷಣದಿಂದಲೇ ಶುರುವಾಗುವ, ನಮ್ಮ ಸಮಯದ ಗೊಂಬೆಯ ಟಿಕ್..ಟಿಕ್‌ನ ಮೂಲ ಇರುವುದು ಗ್ರೀನ್‌ವಿಚ್‌ನಲ್ಲಿ ಎಂದು ತಿಳಿದಿದ್ದರೂ, ಗ್ರೀನ್‌ವಿಚ್ ಲಂಡನ್ನಿನಲ್ಲಿದೆ ಎಂದು ಪ್ರಾಯಶಃ ಬಹುತೇಕ ಜನರಿಗೆ ತಿಳಿದಿರಲಾರದು. ಹಾಗಾಗಿಯೇ, ಲಂಡನ್‌ಗೆ ಹೋಗುವ ಅಸಂಖ್ಯಾತ ಭಾರತೀಯರು, ಈ ಇತಿಹಾಸ ಪ್ರಖ್ಯಾತ ಸ್ಥಳವನ್ನು ನೋಡದೆ ವಾಪಸ್ ಬರುವ ಸಂಭವವೇ ಹೆಚ್ಚು.

**ರಾಯಲ್ ಅಬ್ಸರ್‌ವೇಟರಿ**

ಲಂಡನ್ನಿನ ಗ್ರೀನ್‌ವಿಚ್‌ನಲ್ಲಿರುವ ರಾಯಲ್ ಅಬ್ಸರ್‌ವೇಟರಿಯನ್ನು ಸಮಯದ ಮನೆ (ಹೌಸ್ ಆಫ್ ಟೈಮ್) ಎಂದೇ ಕರೆಯುತ್ತಾರೆ. ಕೇಂದ್ರ ಲಂಡನ್ನಿನಿಂದ ಸುಮಾರು 10 ಕಿ.ಮೀ ದೂರದಲ್ಲಿರುವ ಗ್ರೀನ್‌ವಿಚ್‌ಗೆ ಹೋಗಲು ಅಸಂಖ್ಯಾತ ಬಸ್ಸುಗಳಿವೆ. ಕಟ್ಟಿ ಸಾರ್ಕ್ ಟ್ಯೂಬ್ ನಿಲ್ದಾಣದಲ್ಲಿ ಇಳಿದು ಗ್ರೀನ್‌ವಿಚ್‌ಅನ್ನು ತ್ವರಿತವಾಗಿ ಸೇರಬಹುದು. ಅಥವಾ, ನಿಮಗೊಂದು ಆಹ್ಲಾದಕರ ಅನುಭವ ಬೇಕೆ? ಹಾಗಿದ್ದಲ್ಲಿ ಕೇಂದ್ರ ಲಂಡನ್ನಿನಿಂದ ದೋಣಿ ವಿಹಾರದ ಮೂಲಕವೂ ಗ್ರೀನ್‌ವಿಚ್ ಸೇರಬಹುದು.

ಲಂಡನ್ ಮಹಡಿ ಬಸ್ಸಿನಲ್ಲಿ ಕುಳಿತು, ಇಲ್ಲಿನ ಚರಿತ್ರೆಯನ್ನು ಮೆಲುಕು ಹಾಕುತ್ತಾ ಸಂಚರಿಸಿದ ನನಗೆ, ಗ್ರೀನ್‌ವಿಚ್ ತಲುಪಲು ಒಂದು ಗಂಟೆಯಾಗಿದ್ದೇ ತಿಳಿಯಲಿಲ್ಲ. ರಾಯಲ್ ಮಾರಿಟೈಮ್ ವಸ್ತು ಸಂಗ್ರಹಾಲಯದ ನಿಲ್ದಾಣದಲ್ಲಿ ಇಳಿದು, ವಿಶಾಲವಾದ ರಾಯಲ್ ಉದ್ಯಾನವನವನ್ನು ದಾಟಿದರೆ, ದೂರದಿಂದಲೇ ಗುಡ್ಡದ ಮೇಲಿರುವ ಯೂರೋಪಿಯನ್ ಶೈಲಿಯ ರಾಯಲ್ ಅಬ್ಸರ್‌ವೇಟರಿ ಕಾಣುತ್ತದೆ.

**ಸನ್‌ಡಯಲ್‌ಗಳ ಬಳಕೆ**

ಮುಂಜಾನೆ ಮತ್ತು ಸಂಜೆ ಗರಿಷ್ಠ ಮಟ್ಟದಲ್ಲಿರುವ ನೆರಳು, ಮಧ್ಯಾಹ್ನ ಕನಿಷ್ಠವಾಗಿರುತ್ತದೆಂದು ಆದಿಮಾನವನಿಗೂ ತಿಳಿದಿತ್ತು. ಇಂದಿನ ಗಡಿಯಾರದ ಕಾರ್ಯವೈಖರಿಯಂತೆಯೇ, ಕಲ್ಲುಗಳಿಂದ ನೆರಳಿನ ಗಾತ್ರ ಮತ್ತು ದಿಕ್ಕನ್ನು ಗುರುತಿಸಿ ಸಮಯದ ಅಂದಾಜು ಮಾಡಲಾಗುತ್ತಿತ್ತು. 3500 ವರ್ಷಗಳ ಹಿಂದೆಯೇ ಈಜಿಪ್ಟಿನಲ್ಲಿ ಕಲ್ಲಿನ ಸನ್‌ಡಯಲ್‌ಗಳ ಬಳಕೆ ಇತ್ತೆಂದು ತಿಳಿದು ಬಂದಿದೆ. ಆದರೆ, ಸನ್‌ಡಯಲ್‌ಗಳ ಬಳಕೆಗೆ ಸೂರ್ಯನ ಪ್ರಕಾಶ ಬೇಕಿತ್ತು; ಸಂಜೆಯ ನಂತರ ಸಮಯವನ್ನು ಗುರುತಿಸಲು ಸಾಧ್ಯವಿರಲಿಲ್ಲ. ಹಾಗಾಗಿ ಸಮಯವನ್ನು ನಿಖರವಾಗಿ ಅಳೆಯಲು ಮಾನವನು ಸಾವಿರಾರು ವರ್ಷಗಳಿಂದ ಸಂಶೋಧನೆಯನ್ನು ಮಾಡುತ್ತಲೇ ಬಂದಿದ್ದಾನೆ. ಇದು ಕಲ್ಲಿನ ಸನ್‌ಡಯಲ್‌ಗಳಿಂದ ಆರಂಭವಾಗಿ, ಇಂದಿನ ಗಡಿಯಾರದ ಮೂಲ ಸ್ವರೂಪಕ್ಕೆ ಬಂದದ್ದು 15ನೇ ಶತಮಾನದಲ್ಲಿ!

**ನೌಕಾ ಸಂಚಾರದ ಸಮಸ್ಯೆ**

ಒಂದು ಕಾಲದಲ್ಲಿ ಸಾಕಷ್ಟು ದೇಶಗಳನ್ನು ಆಕ್ರಮಿಸಿದ್ದ ಬ್ರಿಟಿಶರಿಗೆ, ನೌಕಾ ಮತ್ತು ಜಲಸಂಚಾರದ ಕೌಶಲ್ಯದ ಹಿನ್ನೆಲೆ ಇತ್ತು. ಈ ಕೌಶಲ್ಯ, ಅಪರಿತರಿಮಿತ ಶಕ್ತಿಯಾಗಿ ಪರಿವರ್ತನೆಯಾಗುವುದರ ಹಿಂದೆ, ಸರ್ ಐಸಾಕ್ ನ್ಯೂಟನ್, ಫ್ಲಾಮ್‌ಸ್ಟೀಡ್ ಸೇರಿದಂತೆ ಅನೇಕ ವಿಜ್ಞಾನಿಗಳ ಮಹತ್ವದ ಪಾತ್ರವಿದೆ.

ಆದರೂ, 17ನೇ ಶತಮಾನದವರೆಗೆ ನಾವಿಕರಿಗೆ ಸಂಚರಿಸುವ ಹಡಗುಗಳ ಅಕ್ಷಾಂಶ (ಲ್ಯಾಟಿಟ್ಯೂಡ್) ಮತ್ತು ರೇಖಾಂಶದ (ಲಾಂಗ್ಟಿಟ್ಯೂಡ್) ವಿವರಗಳನ್ನು ಗ್ರಹಿಸಲು ಸಾಧ್ಯವಿರದೆ, ಹಡಗಿನ ನಿಖರವಾದ ಸ್ಥಾನ ಮತ್ತು ಸಮಯದ ಮಾಹಿತಿ ತಿಳಿಯುತ್ತಿರಲಿಲ್ಲ. ಇದರಿಂದ ಗಂಭೀರವಾದ ಸಮಸ್ಯೆಗಳು ಉದ್ಭವಿಸಿ, ನೌಕಾ ಸಂಚಾರ ಸುರಕ್ಷಿತವಾಗಿರಲಿಲ್ಲ.

1675ರಲ್ಲಿ ಬ್ರಿಟಿಶ್ ಮಹಾರಾಜರಾದ ಚಾರ್ಲ್ಸ್-2 ಅವರು, ಹೆಸರಾಂತ ಖಗೋಳಜ್ಞ ಜಾನ್ ಫ್ಲಾಮ್‌ಸ್ಟೀಡ್‌ರವರನ್ನು ನೇಮಕ ಮಾಡಿ, ರಾಯಲ್ ಅಬ್ಸರ್‌ವೇಟರಿಯನ್ನು ಸ್ಥಾಪಿಸಲು ನಿರ್ಣಯಿಸಿದರು. ರಾಜಾಜ್ಞೆಯ ಪ್ರಕಾರ ಫ್ಲಾಮ್‌ಸ್ಟೀಡ್‌ರವರಿಗೆ ಗ್ರಹಗಳ ಚಲನೆ ಮತ್ತು ನಕ್ಷತ್ರಗಳ ಸ್ಥಾನಗಳನ್ನು ನಿರ್ಧರಿಸಿ, ಜಲಸಂಚಾರದ ನೈಪುಣ್ಯತೆಗೆ ಬೇಕಾಗಿದ್ದ ರೇಖಾಂಶಗಳ ಮತ್ತು ಸ್ಥಳೀಯ ಸಮಯವನ್ನು ನಿಖರವಾಗಿ ಕಂಡುಹಿಡಿಯುವ ಜವಾಬ್ದಾರಿ ನೀಡಲಾಗಿತ್ತು.

1676ರಿಂದ ಫ್ಲಾಮ್‌ಸ್ಟೀಡ್‌ರವರು ತಾವೇ ಸ್ಥಾಪಿಸಿದ ರಾಯಲ್ ಅಬ್ಸರ್‌ವೇಟರಿಯಲ್ಲಿ ಸಂಶೋಧನೆಯನ್ನು ಮಾಡತೊಡಗಿದರು. 1680ರಲ್ಲಿ ಯುರೇನಸ್ ಗ್ರಹವನ್ನು ಮೊಟ್ಟ ಮೊದಲ ಬಾರಿಗೆ ಕಂಡ ವಿಜ್ಞಾನಿ ಫ್ಲಾಮ್‌ಸ್ಟೀಡ್. ಅದಲ್ಲದೇ ಸುಮಾರು ಮೂರು ಸಾವಿರ ನಕ್ಷತ್ರಗಳನ್ನು ಗುರುತಿಸಿ, ನಕ್ಷತ್ರಗಳ ಪಟ್ಟಿಯನ್ನೂ ತಯಾರಿಸಿದ ಖ್ಯಾತಿ ಇವರದು.

**ಐಲ್ ಆಫ್ ಸಿಲಿ ದುರಂತ**

ಫ್ಲಾಮ್‌ಸ್ಟೀಡ್‌ರವರ ಸಂಶೋಧನೆ ನಡೆಯುತ್ತಿದ್ದಂತೆಯೇ, 1707ರಲ್ಲಿ ಬ್ರಿಟಿಶ್



ಫ್ಲಾಮ್‌ಸ್ಟೀಡ್ ಹೌಸ್

ಫಸ್ಟ್ ಶಾಪ್ ಇನ್ ದಿ ವರ್ಲ್ಡ್




ಇತಿಹಾಸದಲ್ಲಿಯೇ ಅತ್ಯಂತ ಭೀಕರವಾದ ನೌಕಾ ದುರಂತ ಸಂಭವಿಸಿತು. ಬ್ರಿಟನ್ ಮತ್ತು ಫ್ರಾನ್ಸ್ ನಡುವಿನ ಯುದ್ಧದ ಬಳಿಕ, ಸ್ವದೇಶಕ್ಕೆ ಹಿಂತಿರುಗುತ್ತಿದ್ದ ಬ್ರಿಟಿಶ್ ನೌಕಾಪಡೆಗೆ ಸೇರಿದ ನಾಲ್ಕು ಹಡಗುಗಳು ಮುಳುಗಡೆಯಾಗಿ, 1400 ನಾವಿಕರು ಮೃತ್ಯುವಿಗೀಡಾದರು. ಪ್ರತಿಕೂಲವಾದ ವಾತಾವರಣದಲ್ಲಿ, ನಾವಿಕರಿಗೆ ಅವರಿರುವ ಸ್ಥಳದ ವಿವರ ನಿಖರವಾಗಿ ತಿಳಿಯದೆ, ಹಡಗುಗಳು ನಿಗದಿತ ಹಾದಿಯನ್ನು ತಪ್ಪಿ, ಐಲ್ ಅಫ್ ಸಿಲಿ ಬಳಿಯ ಬಂಡೆಗಳಿಗೆ ಅಪ್ಪಳಿಸಿ ದುರಂತ ಸಂಭವಿಸಿತು. ಈ ದುರಂತದಿಂದ, ಫ್ಲಾಮ್‌ಸ್ಟೀಡ್‌ರವರ ಕಾರ್ಯಕ್ಕೆ ಮತ್ತಷ್ಟು ಪ್ರಾಧಾನ್ಯ ಸಿಕ್ಕಿ, ತೀವ್ರ ಗತಿಯಲ್ಲಿ ಸಂಶೋಧನೆ ಮುಂದುವರಿದು, ನಿರ್ಣಾಯಕ ಹಂತವನ್ನು ತಲುಪಿತು.

**ಫ್ಲಾಮ್‌ಸ್ಟೀಡ್ ಹೌಸ್**

ಫ್ಲಾಮ್‌ಸ್ಟೀಡ್‌ರವರು ಮಾಡಿದ ಅಮೋಘವಾದ ಸೇವೆಯ ಸ್ಮರಣೆಯಲ್ಲಿ, ಅಬ್ಸರ್‌ವೇಟರಿಯ ಕಟ್ಟಡವನ್ನು ಫ್ಲಾಮ್‌ಸ್ಟೀಡ್ ಹೌಸ್ ಎಂದು ಕರೆಯುತ್ತಾರೆ. ಈ ಕಟ್ಟಡದ ಮೇಲ್ಭಾಗದಲ್ಲಿ, ಕೆಂಪು ಬಣ್ಣದ ಚೆಂಡನ್ನು ಧ್ವಜಸ್ಥಂಭದ ಮೇಲಿರಿಸಲಾಗಿದೆ. ಈ ವಿಶಿಷ್ಟವಾದ ಚೆಂಡು ಪ್ರತಿನಿತ್ಯ ಮಧ್ಯಾಹ್ನ 12.55ಕ್ಕೆ ಸ್ಥಂಭದ ಮೇಲಕ್ಕೇರಿ, 1 ಗಂಟೆಗೆ ಕೆಳಗಿಳಿಯುತ್ತದೆ. 1833ರಲ್ಲಿ ಸ್ಥಾಪಿಸಲಾದ ಈ ಧ್ವಜ ಸ್ಥಂಭದಿಂದ, ನಾವಿಕರಿಗೆ ಮತ್ತು ನಾಗರಿಕರಿಗೆ, ದೂರದಿಂದಲೇ ಸಮಯವನ್ನು ಗ್ರಹಿಸಲು ಆಗುತ್ತಿತ್ತು.



ಮೆಟಿರಿಯಾರೈಟ್



ರಾಯಲ್ ಗಾರ್ಡನ್

**ಗ್ರೀನ್‌ವಿಚ್ ಟೈಮ್ ಲೇಡಿ**

ಆದರೆ, ಇದರಿಂದ ಸಮಯದ ಮಾಹಿತಿಯನ್ನು ಎಲ್ಲೆಡೆ ಪ್ರಸಾರಿಸಲು ಆಗುತ್ತಿರಲಿಲ್ಲ. ಕೊನೆಗೂ, ಸಮಸ್ಯೆಗೆ ಒಂದು ಪರಿಹಾರ ಹುಡುಕಲಾಯಿತು. ಜಾನ್ ಹೆನ್ರಿ ಎಂಬ ಟೈಮ್ ಕೀಪರ್, 1836ರಿಂದ ಲಂಡನ್ನಿನ ರೈಲು ಇಲಾಖೆ, ಗಡಿಯಾರದ ತಯಾರಕರು ಮತ್ತು ಶ್ರೀಮಂತರಿಗೆ, ಸಮಯದ ಮಾಹಿತಿಯನ್ನು ಒದಗಿಸಲು ಆರಂಭಿಸಿದ. 1856ರಲ್ಲಿ ಹೆನ್ರಿಯ ನಿಧನದ ನಂತರ, ಈ ಸೇವೆಯನ್ನು ಆತನ ಹೆಂಡತಿ ಮಾರಿಯಾ ನಡೆಸ ತೊಡಗಿದಳು.

1892ರಿಂದ ಈ ಸೇವೆಯನ್ನು ಅವರ ಮಗಳು ರುತ್ ಬೆಲ್ವಿಲ್ ಮುಂದುವರಿಸಿದಳು. ಪ್ರತಿ ಸೋಮವಾರ, ತನ್ನ ಕಾಲಮಾಪಕ ಯಂತ್ರಕ್ಕೆ (ಕ್ರೋನೋಮೀಟರ್) ಅಬ್ಸರ್‌ವೇಟರಿಯ ಸಮಯವನ್ನು ಹೊಂದಿಸಿ, 'ಅರ್ನಾಲ್ಡ್ ಸರ್ಟಿಫೈಡ್' ಎಂದು ದೃಢೀಕರಿಸಿದ, ನಿಖರವಾದ ಸಮಯವನ್ನು ಲಂಡನ್‌ನ ಪ್ರಮುಖ ಗ್ರಾಹಕರಿಗೆ ಪ್ರಸಾರ ಮಾಡುತ್ತಿದ್ದಳು. ಇಂದಿನ ಯುಗದಲ್ಲಿ ಊಹಿಸಲೂ ಅಸಾಧ್ಯವೆನ್ನುವ ಈ ಸೇವೆ ಉಚಿತವಾಗಿರಲಿಲ್ಲ! 1930ವರೆಗೆ ಈ ಸೇವೆ ಸಲ್ಲಿಸಿದ ರುತ್, 'ಗ್ರೀನ್‌ವಿಚ್ ಟೈಮ್ ಲೇಡಿ' ಎಂದೇ ಹೆಸರುವಾಸಿಯಾದಳು.

**ಗ್ರೀನ್‌ವಿಚ್ ಮೀನ್ ಟೈಮ್ (ಜಿಎಂಟಿ)**

19ನೇ ಶತಮಾನದ ಮಧ್ಯಂತರದಲ್ಲಿ, ರೇಖಾಂಶಗಳ ಮತ್ತು ಸ್ಥಳೀಯ ಸಮಯದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಡಿಯಲಾಯಿತು. 1884ರ ಅಂತರರಾಷ್ಟ್ರೀಯ ಒಪ್ಪಂದದ ಪ್ರಕಾರ, ರಾಯಲ್ ಅಬ್ಸರ್‌ವೇಟರಿಯ ಕಾಲ್ಪನಿಕ ಮೂಲ ರೇಖಾಂಶದ (ಪ್ರೈಮ್ ಮೆರಿಡಿಯನ್ 0ಡಿಗ್ರಿ 0'00) ಆಧಾರದಿಂದಲೇ, ಬೇರೆ ರೇಖಾಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಶೂನ್ಯ ರೇಖಾಂಶವೆಂದೂ

ಕರೆಯಲ್ಪಡುವ ಇದನ್ನು ಗುರುತಿಸಲು, ಉಕ್ಕಿನ ಪಟ್ಟಿಯನ್ನು ಅಬ್ಸರ್‌ವೇಟರಿಯ ಹೊರಾಂಗಣದಲ್ಲಿ ಜೋಡಿಸಲಾಗಿದೆ. ಇಲ್ಲಿಂದಲೇ ಪ್ರಪಂಚದ ಸಮಯದ ಟಿಕ್..ಟಿಕ್.. ಶುರುವಾಗಿ, ಇಲ್ಲಿನ ಸಮಯವನ್ನು ಗ್ರೀನ್‌ವಿಚ್ ಮೀನ್ ಟೈಮ್ (ಜಿಎಂಟಿ) ಎಂದು ಕರೆಯಲಾಗುತ್ತದೆ. ಇಲ್ಲಿಂದ ಪ್ರತಿ 15 ಡಿಗ್ರಿ ರೇಖಾಂಶಕ್ಕೆ ಒಂದು ಗಂಟೆಯ ವ್ಯತ್ಯಾಸದಂತೆ, ಪ್ರಪಂಚದಲ್ಲಿ ಒಟ್ಟು 24 (ಇಲ್ಲಿಂದ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ತಲಾ 12) ವಲಯಗಳಿದ್ದು, ಆಯಾ ದೇಶಗಳ ಆಡಳಿತಾತ್ಮಕ ಕಾರಣಗಳಿಂದ ಸ್ಥಳೀಯ ಸಮಯವನ್ನು ನಿರ್ಧರಿಸಲಾಗುತ್ತದೆ.

ಉದಾಹರಣೆಗೆ, ಭಾರತದ ವಿಸ್ತೀರ್ಣ ಪಶ್ಚಿಮದಲ್ಲಿ 68ಡಿಗ್ರಿ7' ಮತ್ತು ಪೂರ್ವದಲ್ಲಿ 97ಡಿಗ್ರಿ25' ಸುಮಾರು 30ಡಿಗ್ರಿ ಅಂತರ ರೇಖಾಂಶದಲ್ಲಿದೆ ಯಾದರೂ, ಒಂದೇ ಸಮಯದ ವಲಯದ್ದು (ಐಎಸ್‌ಟಿ), ಇದು ಜಿಎಂಟಿಗಿಂತ 5 ಗಂಟೆ 30 ನಿಮಿಷಗಳ ಕಾಲ ಮುಂದಿದೆ. ಇದೇ ರೀತಿ ಚೀನಾದಲ್ಲೂ, ಒಂದೇ ಸಮಯದ ವಲಯವಿದೆ. ಆದರೆ ಅಮೇರಿಕಾದಲ್ಲಿ ಹಾಗಲ್ಲ; ಹಲವಾರು ವಲಯಗಳಿದ್ದು, ಪಶ್ಚಿಮದ ಲಾಸ್ ಏಂಜಲೀಸ್‌ಗೂ ಪೂರ್ವದ ನ್ಯೂಯಾರ್ಕ್‌ಗೂ ಮೂರು ಗಂಟೆಗಳ ವ್ಯತ್ಯಾಸವಿದೆ.

**ಡೇ ಲೈಟ್ ಸೇವಿಂಗ್**

ಇಂದಿಗೂ, ಅನೇಕ ದೇಶಗಳಲ್ಲಿ ವಸಂತಮಾಸದ ನಿರ್ಧಾರಿತ ದಿನದಂದು, ಗಡಿಯಾರಗಳನ್ನು ಬೆಳಗಿನ ಜಾವದ 1 ಗಂಟೆಗೆ, ಒಂದು ಗಂಟೆಯ ಮುನ್ನಡೆಗೆ ಒಳಪಡಿಸುತ್ತಾರೆ. ವಸಂತಮಾಸದಲ್ಲಿ ಅನುಸರಿಸುವ ಈ ಕ್ರಮದಿಂದ ಹಗಲು ಬೆಳಕು ಹೆಚ್ಚಾಗಿ ವ್ಯಾಪಾರ, ಆಟ, ಮನರಂಜನೆಗಳ ಅಭಿವೃದ್ಧಿಗೆ ಸಹಾಯವಾಗುತ್ತದೆ. ಈ ಪರಿಪಾಟ ಹೆಚ್ಚಾಗಿ ಯೂರೋಪ್ ಮತ್ತು ಅಮೆರಿಕಾ ರಾಷ್ಟ್ರಗಳಲ್ಲಿದೆ. ಆದ್ದರಿಂದಲೇ, ಲಂಡನ್‌ನಲ್ಲಿ ವಸಂತಮಾಸದಲ್ಲಿ ಪಾಲಿಸುವ ಸಮಯ ಜಿಎಂಟಿಗಿಂತ ಒಂದು ಗಂಟೆ ಮುಂದಿರುತ್ತದೆ.

**ಲಂಡನ್ನಿನ ಏಕೈಕ ಪ್ಲಾನೆಟೋರಿಯಮ್**

ರಾಯಲ್ ಅಬ್ಸರ್‌ವೇಟರಿಯಲ್ಲಿ ನೋಡಬೇಕಾದ ಸ್ಥಳಗಳು ಮತ್ತು ತಿಳಿದುಕೊಳ್ಳಬೇಕಾದ ವಿಷಯಗಳು ಅನೇಕ. ಇಲ್ಲಿ, ಲಂಡನ್ನಿನ ಏಕೈಕ ಪ್ಲಾನೆಟೋರಿಯಮ್ 2007ರಲ್ಲಿ ಉದ್ಘಾಟನೆಯಾಯಿತು. ಸುಮಾರು 250 ಕಂಚಿನ ಪಟ್ಟಿಗಳನ್ನು ಬೆಸೆದು, ಈ ಪಟ್ಟಿಗಳು ಪುರಾತನವಾಗಿ ಕಾಣುವಂತೆ ವಿಶೇಷವಾದ ಬಣ್ಣ ಹಚ್ಚಿ, ಬುಗುರಿಯ ಆಕಾರದ ಪ್ಲಾನೆಟೋರಿಯಮ್ ಕಟ್ಟಡದ ಮೇಲೆ ಜೋಡಿಸಲಾಗಿದೆ. ಅತ್ಯಾಕರ್ಷಕವಾದ ಈ ಪ್ಲಾನೆಟೋರಿಯಮ್‌ನಲ್ಲಿ, ಪ್ರತಿಬಿಂಬಿಸುವ ಗಾಜಿನ ಛಾವಣಿಯಿಂದ ಭೂಮಿಯ ಅಗಾಧವಾದ ಇತಿಹಾಸವನ್ನು ಗ್ರಹಿಸಬಹುದು. ಅಂತರಿಕ್ಷದಿಂದ ಬರುವ ಛಾಯಾಚಿತ್ರಗಳನ್ನು ವೀಕ್ಷಿಸಿ ಅಧ್ಯಯನ ಮಾಡಬಹುದು.



ಲಂಡನ್ನಿನ ಏಕೈಕ ಪ್ಲಾನೆಟೋರಿಯಮ್

ಅದ್ಭುತವಾಗಿ ರೂಪಿಸಿರುವ ಅಸ್ಟ್ರಾನಮಿ ಸೆಂಟರ್‌ಅನ್ನೂ ನೋಡಲೇಬೇಕು. ಇಲ್ಲಿನ ವಿಶೇಷವೇನೆಂದರೆ, 4.5 ಶತಕೋಟಿ (ಬಿಲಿಯನ್) ವರ್ಷಗಳ ಹಿಂದಿನ ಉಲ್ಕೆಯ (ಮೆಟಿರಿಯೊರೈಟ್) ಅವಶೇಷವನ್ನು ಸ್ಪರ್ಶಿಸಬಹುದು! ಅಂತರಿಕ್ಷದ ಕ್ಷಿಪಣಿಯ ಅನುಭವವನ್ನು ನಿಮ್ಮದಾಗಿಸಿಕೊಂಡು, ನಿಗೂಢವಾದ ವಿಶ್ವ ನಿರ್ಮಾಣದ ಪ್ರಶ್ನೆಗಳಿಗೆ ಉತ್ತರವನ್ನೂ ಪಡೆಯಬಹುದು.

ಇಲ್ಲಿ ಖಗೋಳ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಅಮೂಲ್ಯವಾದ ವಸ್ತುಗಳಿರುವ ಸಂಗ್ರಹಾಲಯವಿದೆ. ಇಲ್ಲಿ ಗಡಿಯಾರದ ಸೃಷ್ಟಿಯ ಬೆಳವಣಿಗೆಗಳನ್ನು ಅವಲೋಕಿಸಬಹುದು. ಹಿಂದಿನಿಂದಲೂ ಸಂಶೋಧನೆಗೆ ಉಪಯೋಗಿಸಿದ್ದ ಹಲವಾರು ಟೆಲಿಸ್ಕೋಪ್ ಮತ್ತಿತರ ಉಪಕರಣಗಳನ್ನು ವೀಕ್ಷಿಸಬಹುದು.

ಅಬ್ಸರ್‌ವೇಟರಿಯ ಅಂಗಡಿಯಲ್ಲಿ ನೆನಪಿನ ಕಾಣಿಕೆಗಳನ್ನು ಖರೀದಿಸಿ ಹೊರಾಂಗಣಕ್ಕೆ ಬಂದಾಗ ನಮಗೆ ಸೋಜಿಗವೊಂದು ಕಾದಿತ್ತು. ಮೂಲ ರೇಖಾಂಶದ ಉಕ್ಕಿನ ಪಟ್ಟಿಯ ಮೇಲೆ ಫೋಟೊ ತೆಗೆದುಕೊಳ್ಳುವುದರ ಜೊತೆಗೆ, ಪಕ್ಕದಲ್ಲಿರುವ ವೆಂಡಿಗ್ ಯಂತ್ರದಲ್ಲಿ ಒಂದು ಪೌಂಡ್ ಹಾಕಿದರೆ ನಾವು ಈ ಸ್ಥಳಕ್ಕೆ ಭೇಟಿ ಮಾಡಿರುವ ದಿನಾಂಕ ಮತ್ತು ಸಮಯದ ದಾಖಲೆ ಪತ್ರ ಸಿಗುತ್ತದೆ. ಆದರೆ ಅದರಲ್ಲಿ ನಮ್ಮ ಹೆಸರನ್ನು ನಾವೇ ಬರೆದುಕೊಳ್ಳಬೇಕು!

ಅಬ್ಸರ್‌ವೇಟರಿಯ ಪರಿಸರದಲ್ಲಿಯೇ ರಾಯಲ್ ಮಾರಿಟೈಮ್ ವಸ್ತು ಸಂಗ್ರಹಾಲಯವಿದೆ. ಇದಕ್ಕೆ ಹೊಂದಿಕೊಂಡಂತಿರುವ ಬ್ರಿಟನ್ನಿನ ರಾಣಿಯವರ ಅರಮನೆಯನ್ನು ಅಪರೂಪದ ಕಲಾವಸ್ತುಗಳ ಸಂಗ್ರಹಾಲಯವಾಗಿ ಮಾರ್ಪಡಿಸಲಾಗಿದೆ. ರಾಯಲ್ ಅಬ್ಸರ್‌ವೇಟರಿಯೂ ಸೇರಿದಂತೆ ಈ ಮೂರೂ ಸ್ಥಳಗಳ ಮಹತ್ವವನ್ನು ಗ್ರಹಿಸಿ, ಯುನೆಸ್ಕೊ ಇಲ್ಲಿಗೆ ವಿಶ್ವ ಪರಂಪರೆಯ ತಾಣದ ಸ್ಥಾನಮಾನವನ್ನು ನೀಡಿದೆ.

ಲಂಡನ್ನಿಗೆ ಹಿಂದಿರುಗುತ್ತಿದ್ದ ನನಗೆ, ಕಟ್ಟಿಸಾರ್ಕ್ ಟ್ಯೂಬ್ ನಿಲ್ದಾಣದ ದಾರಿಯಲ್ಲಿದ್ದ ಗಡಿಯಾರದ ಅಂಗಡಿಯ ಫಲಕದ ಮೇಲಿದ್ದ ಜಾಣತನದ ಜಾಹೀರಾತು: 'ದಿ ಫರ್ಸ್ಟ್ ಶಾಪ್ ಇನ್ ದಿ ವರ್ಲ್ಡ್ 0ಡಿಗ್ರಿ00'04' ಗಮನಕ್ಕೆ ಬಂತು. ಸಮಯದ ಹೆಜ್ಜೆಗುರುತುಗಳನ್ನು ಗುರುತಿಸಿ, ಸಮಯದ ಮನೆಯ ವಿಸ್ಮಯಕಾರೀ ಲೋಕದಲ್ಲಿ ತಲ್ಲೀನನಾಗಿ, ಹೀಥ್ರೂ ವಿಮಾನ ನಿಲ್ದಾಣವನ್ನು ತಲುಪಿದೆ. ಗ್ರೀನ್‌ವಿಚ್‌ಗಿಂತ ಐದೂವರೆ ಗಂಟೆ ಮುಂದಿರುವ ಬೆಂಗಳೂರಿನ ಸಮಯಕ್ಕೆ ಕೈಗಡಿಯಾರವನ್ನು ಹೊಂದಿಸಿಕೊಂಡೆ.

ಮತ್ತೊಮ್ಮೆ ಅರಿವಾಯಿತು– ಭೂಮಿ ನಿಜಕ್ಕೂ ದುಂಡಗಿದೆ.

ನ್ಯಾಷನಲ್ ಮಾರಿಟೈಮ್ ವಸ್ತು ಸಂಗ್ರಹಾಲಯ
